ಉಪಾಧ್ಯಕ್ಷೆಣಿಯವರು : ಇದು ಏನಿದ್ದರೂ ಪ್ರಸೆಂಟ್ ಮಾಡಿದಮೇಲೆ ತಮಗೆ ಕಾಪಿಯನ್ನು ವಿತರಣೆ ಮಾಡುತ್ತಾರೆ. ವಿತರಣೆ ಮಾಡಿದ ಮೇಲೆ ಸ್ವಲ್ಪ ಸಮಯ ಕೊಟ್ಟು ಆಮೇಲೆ ಬೇರೆ ವಿಷಯಗಳನ್ನು ತೆಗೆದುಕೊಂಡು, ನಂತರ ಇದನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿತರಣೆ ಮಾಡಿದ ಮೇಲೆ ಇವತ್ತು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಏನಿದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಅದಕ್ಕೋಸ್ಕರ ದಯಮಾಡಿ ಚರ್ಚೆಯನ್ನು ಮುಂದಕ್ಕೆ ಹಾಕಬೇಕು.

ಉಪಾಧ್ಯಕ್ಷೆಣಿಯವರು : ಈಗ ಅವರು ಪ್ರಸೆಂಟ್ ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಸೆಂಟ್ ಮಾಡುವುದಕ್ಕೆ ಮುಂಚೆಯೇ ತಮ್ಮ ಗಮನಕ್ಕೆ ತರತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾವು ಇಷ್ಟು ವರ್ಷ ನೋಡಿದ ಹಾಗೆ, ನಮಗೆ ಗೊತ್ತಿರುವ ಹಾಗೆ, ಇದನ್ನು ಯಾವಾಗಲೂ ಮೊದಲೇ ಕಳುಹಿಸುವುದಿಲ್ಲ. ಇದನ್ನು ಪ್ರಸೆಂಟ್ ಏನು ಮಾಡುತ್ತಾರೆ, ಮಾಡಿದ ಮೇಲೆ ಕಾಪಿ ತಮಗೆ ಬರುತ್ತದೆ, ನಂತರ ತಕ್ಷಣ ಚರ್ಚೆ ಮಾಡಿ ಎಂದು ಹೇಳುವುದಿಲ್ಲ. ಈ ರೀತಿ ಕೊಟ್ಟಮೇಲೆ, ಬೇರೆ ವಿಷಯಗಳನ್ನು ತೆಗೆದುಕೊಂಡು, ಅನಂತರ ಇದನ್ನು ಚರ್ಚೆಗೆ ತೆಗೆದುಕೊಂಡು ಪಾಸ್ ಮಾಡಬೇಕಾಗುತ್ತದೆ. ಹಿಂದೆ ಒಂದು ಸಾರಿ ಏನು ಮಾಡಿದ್ದಾರೆ ಗೊತ್ತೇ, ಪ್ರಸೆಂಟ್ ಮಾಡಿದ ತಕ್ಷಣ ಚರ್ಚೆ ಮಾಡಿಯೋ ಅಥವಾ ಚರ್ಚೆ ಇಲ್ಲದೆಯೇ ಪಾಸ್ ಆಗಿದೆ. ತಮಗೆ ಗೊತ್ತಿರುವ ಹಾಗೆ ಇದು ಮೊದಲನೇ ಕಂತು, ಈ ಕಾಪಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ನಾವು ಅಲ್ಲಿ ಕುಳಿತಾಗ, ಎಷ್ಟೋ ಸಾರಿ ಚರ್ಚೆ ಇಲ್ಲದೆ ಮಂಜೂರಾತಿ ಕೊಟ್ಟಿದ್ದೇವೆ. ಏಕೆಂದರೆ, ಇದು ಪಾಸ್ ಮಾಡಲೇಬೇಕಾದ ವಿಚಾರ. ನೀವು ಚರ್ಚೆ ಮಾಡಬಾರದು ಎಂಬ ಅಭಿಪ್ರಾಯದಿಂದ ಈ ಮಾತನಾಡುತ್ತಾ ಇಲ್ಲ. That is not at all my intention but the point is, ಎಷ್ಟೋ ಸಾರಿ ಚರ್ಚೆ ಇಲ್ಲದೆ ಪಾಸ್ ಆಗಿರುವುದೂ ಉಂಟು. ಇವೆಲ್ಲಾ ಆಗಬೇಕಾದ, ರಾಜ್ಯಾಂಗಬದ್ಧವಾದ ವಿಚಾರಗಳು. ಈಗ ಬರಗಾಲದ ವಿಚಾರ ಮತ್ತೊಂದು ಚರ್ಚೆ ಮಾಡಿ. ಇದರಲ್ಲಿ ಇಷ್ಟೇ ಪಾಯಿಂಟ್ಸ್ ಇರತಕ್ಕಂಥಾದ್ದು. ಇದರ ಬಗ್ಗೆ ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ಆಮೇಲೆ ನೀವು ಚರ್ಚೆ ಮಾಡಿ. ಈಗ ಬೇರೆ ವಿಷಯ ಇದ್ದರೆ ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಅತ್ಯಂತ ಪ್ರಮುಖವಾದ ವಿಷಯ. ಇದರ ಬಗ್ಗೆ ಚರ್ಚೆ ಮಾಡಿ, ಅಲ್ಲಿರತಕ್ಕ ನ್ಯೂನತೆಗಳನ್ನು, ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದು, ಸರಿಪಡಿಸತಕ್ಕ ಅಗತ್ಯ ಇದೆ. ತಾವು ಈಗ ಪ್ರಸೆಂಟ್ ಮಾಡಿ ಆದರೆ ಚರ್ಚೆ ಮತ್ತು ವೋಟಿಂಗ್ ಮಾತ್ರ ಮುಂದಕ್ಕೆ ಹಾಕಬೇಕು, ಇದೇ ನಮ್ಮ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ : ಇವತ್ತು ಇದು ಪಾಸ್ ಆಗಲೇಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟೊಂದು ತರಾತುರಿಯಲ್ಲಿ ಪಾಸ್ ಮಾಡತಕ್ಕ ಅಗತ್ಯ ಏನು? ಇದು ಇಲ್ಲಿ ಚರ್ಚೆ ಆಗಲೇಬೇಕು.

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿರುವ ಹಾಗೆ ಎಷ್ಟೋ ಸಾರಿ ಚರ್ಚೆ ಇಲ್ಲದೇ ನಾವು ಪಾಸ್ ಮಾಡಿದ್ದೇವೆ. ನೀವು ಮುಂದಿನ ಸಾರಿ ಎಂದು ಹೇಳಿದರೆ, ಆ ರೀತಿ ಬರುವುದಿಲ್ಲ, ಮಾನ್ಯ ಅಧ್ಯಕ್ಷರೇ, ತಾವು ಸದನದ ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಪ್ರಸೆಂಟ್ ಮಾಡುವುದಕ್ಕೆ ವಿರೋಧ ಇಲ್ಲ. ಆದರೆ, ಸಾಕಷ್ಟು ಚರ್ಚೆಯಾಗಬೇಕಾಗಿದೆ, ಅದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷೆಣಿಯವರು : ಈಗ 68ನೇ ನಿಯಮದ ಮೇರೆಗೆ ಅಲ್ಪಕಾಲಾವಧಿ ಚರ್ಚೆ, ಮಾನ್ಯ ಕಮರುಲ್ ಇಸ್ಲಾಂರವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

ನಿಯಮ 68ರ ಮೇರೆಗೆ ಅಲ್ಪಾವಧಿ ಚರ್ಚೆ.

ವಿಷಯ : ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಉಂಟಾದ ಅನಾವೃಷ್ಟಿ ಹಾಗೂ ಕುಡಿಯುವ ನೀರಿನ ತೀವ್ರ ತೊಂದರೆ ಬಗ್ಗೆ.

SRI QUMURUI ISLAM : (Gulbarga) Madam Deputy Speaker, Gulbarga City is facing acute water scarcity and this situation exisits for the last 20 years. As you are aware the Gulbarge City having only one water source is., Bosa - it was built back 100 years ago with a capacity of 14 feet water and it was raised to 24 feet and in 1972 keeping inview the growth of the population and the development of the Gulbarga City, the Benithora project was taken. This is to meet the needs of both agriculture and drinking water and till today this Bennithora project has not been completed, not even 1/3 of is completed and there is very slow progress as far as this project is concerned. The people of Gulbarga in 1987 formed a citizens Committee.

They agitated for the sanction of the Bheema water Scheme. In 1987 the Bheema Water Scheme was sanctioned with an estimated cost of Rs. 12 crores. At that time the then Government assured that this Scheme will be completed by 1990 and the work will be taken up on a war footing. This was taken up in 1987 with an estimated cost of Rs. 12 crores. The Bheema Water Scheme is 26 Kms from the City. Till today, the work is not going on, on a war footing. Hardly Rs. 2 crores have been spent by this Government out of an estimatd cost of Rs. 12 crores. Every Summer, the people of Gulbarga have been facing water problem and it has been very untolerable. But, in 1990 when I was elected, I tried my level best to present this matter. Every time whenever I got the opportunity whether it is a budget session or other wise. through questions, calling attentions or while speaking on the Budget, presented this matter. I tried my best to pressurise this Government for taking up this Bheema Water Scheme and completing it at an early date. I remember, when Sri T.W. Narasimha Murthy was the Minister for H.U.D., he assured in this House that this Scheme would be completed by 1991. At that time, actually some money was sanctioned in the Budget as will as in the Hyderabad-Karnataka Development Board. I know that this Government has sanctioned Rs. 10 crores from 1990 to 1992. I know that this Government has sanctioned Rs. 10 crores in these in these $2-\frac{1}{2}$ years. Even though that much money is sanctioned, this scheme is not completed.

Now this scheme is estimated to cost Rs. 18 crores. That is the revised estimate. Even after two and half years, the people of Gulbarga did not get water. The target then fixed was complete June 30th 1992. That target was also not fulfilled. Many press people hav come on 6th of this month when the Hon'ble Minister for Railways came to Gulbarga. Right from the beginning, there was a flow of 2 meters of water in the Bheema river. But, the Bheema Water Scheme is not completed and we are not getting water. The catchment area of the Bheema is in Maharastra - Usmanabad District. There were no rains till day before yesterday & there was no water in the Bennithora even through

pipelines are existing. Therefore we could not get water because of the failure of rains. The other source of water is Bosga. That source is completly dried up. I had a discussion with the Chief Minister on 30th. Then he asked his colleagues to rush to Gulbarga and I am thankful to the Hon'ble Minister for Railways, who on the the request or the has agreed to send the water by railway wagons. We are getting only twice a week. 3 MGLs of water is bearing released. If we get water on Monday morning, we dont get on Monday, Tuesday or Wednesday - but we get it only on Thursday, Friday and Saturday for the water. Per release we ar getting only 3 MGLs of water. We are getting water from the wagons and we have made all arrangements. We get 2 lakh gallons of water per day i.e., about 45 - 50 wagons schedule. The wagons reaching from 30th till 12th is spread over like 34-40-50-46 wagons round about 2 lakh gallons of water is coming per day. If it is collected for 3 days, there will be 6 lakh gallons. In addition to that we are getting 50,000 gallons from P&T colony and 50,000 gallons from roza. So, daily one lakh gallon, we are dumping into the filter bed because it is the unaimous decision that there should not be any unheathly competition. We are also getting another 3 lakh gallons pr day from the high yielding borewells which are existing on the periphery of Bosge river. Evern after it is completely dried up we are getting, 3-4 lakh gallons per day. There was some water till 8th. So totally there was 10 lakh gallons of water available per day. Till 9th this was the arrangement. That arrangement has gone and the Hon'ble Minister for Railways has assumed that 120 wagons will be sent. But I tell you, till today the wagons which have come right from 30th is as follows :

on 2nd –11 wagons
2nd - 34 wagons
3rd - 25 wagons
4th - 22 wagons
5th - 39 wagons
6th - 47 wagons
7th - 36 wagons
8th - 35 wagons
9th - 33 wagons
10th - 94 wagons
11th - 82 wagons
12th - 59 wagons

It was assured that 120 wagons will be provided which means 6 lakh gallons of water per day will be supplied to Gulbarga. The officer also and the comparative have made all arrangement is to receive the water. According to the assurance and the press release issued by the Hon'ble Railway Minister, 120 wagons were to came every day, but wagons have

come according to the schedule which I have given just now. My intention is to bring it to the notice of the House that the wagons have not come as promised by the Hon'ble Railway Minister. Of course, we must thank him for having sent the wagons. At the same time we must say that the promise has not been fulfilled entirely. This type of injustice is always going on with the people of Gulbarga I have explained these issues to the Hon'ble Minister for Revenue as well as H.U.D. There is not water even in the railways season and 40% of the borewells are not working and they have gone dry. Whatever demand was there as far as borewells are concerned, you have given. I am not denying that. But, the borewells are not working. The yield from these borewells is minimum. There are borewells in Gujarat and Rajasthan which can drill upto 800 feet. I want such borewells to be brought to Gulbarga. The water tables of Gulbarga has gone down to 500 feet. This is according to the geologists. These borewells are 100% success if they are put into service in Gulbarga. It will be a remedy for Gulbarga. We require about 50-60 such borewells at Gulbarga so that we can solved water problem at Gulbarga. This is my intention. This water problem has arisen only due to the failure of the Government in implementing the Bheema water Supply Scheme.

Now the third assurance is given through the Press and I wanted that assurance should come from the Hon'ble Minister in this House and that the third assurance is, by 31st December 1992 Bheema Scheme will be completed and the people of Gulbarga will get water from Bheema. But, Madam, I want that categorical assurance should come in this House from th Hon'ble Minister, whether this Government is going to fulfil the demand of the people for which an assurance has already been given in the Press outside the House. The Government has failed twice to achieve the target given and this is the third target which the Government has given outside the House. Today, I want an assurance in this House that by 31st December 1992, Bheema Scheme will be completed. I want that whatever the the remaining work is there in the permanent scheme of Bheema, targets should be given. i.e., monthly target should be given. I think the Hon'ble Minister has got the report from his officers that to complete the remaining work which they have already announced in the Press, so much of time is required. The Government has to chalk out the programme where in a monthwise target is tobe fixed. I also want that the target should also be known to the legislators of this House so that we can know that Government is really sincere in this regard. If this is done, the target which has been by the Government will definitely be fulfilled.

I want this assurance from the Hon'ble Minister that the monthwise target will be fixed. Thirdly, both the Ministers, ie., Minister Incharge of the District as well as the Revenue Minister along with the HUD Minister

must come every month and see that the target fixed by then to the Officers is achieved and this should review the progress of work. Let the legislators of the District should also be invited for such review meetings. They must inspect and ensure that work is going on as per the monthly target given to them. Somebody may blame us as to why you are asking the work to be completed by December, why not early?

Sir, that time, the people of Gulbarga are not going to keep quiet. We have tolerated enough. Suppose the Government do not complete this target, then, Gulbarga will witness big demonstration which has never been happened in the history of Gulbarga. This is the feeling of our people. Even for drinking water, people have faced hardship this time. This is the situation in the Gulbarga city which is the heart of the Hyderabad-Karnataka area. We talk of this historical city and in that historical city, there is no drinking water. Madam, I want to put forth another 2-3 demands so that Government can take care of them. Regarding water, I came to know only yesterday that God is very kind on us.... Allah Miya Meherbane hamare upper thodase.... God is very kind on us some water has come and some rains have come in the catchment area. Even Bennethora has got some rain and even in Bosga catchment area, few feet of water is there and it will not take much time to supply the water since existing pipelines are there. I want that the people should get water everyday instead of three days. Today only it has to be announced. Because of God, some rain has come. Immediately arrangements have to be made to supply water daily or atleast on alternative day. I want to make a demand because after a long awaiting of 40 days, in every Mandir, Masjid, we all praved to the God and God was so kind towards us. Even an half an hour rain has given some water in the catchment area. But, at the sametime, God says you must do the work in time. Government has failed and this time, the Government should not fail to fulfil the target given. The Government should have to complete that scheme atleast by 31st December 1992. With these few words, putting these demands, I conclude any my speech.

ಉಪಾಧ್ಯಕ್ಷೆಯವರು : ಮಾನ್ಯ ಶ್ರೀ ಬಸವರಾಜರಾಯರೆಡ್ಡಿ, ಶ್ರೀ ಹಂಪನಗೌಡರವರು, ಶ್ರೀ ಗುರಪಾದಪ್ಪ ನಾಗಮಾರದಲ್ಲಿನವರು, ಶ್ರೀ ಪಿ.ಸಿ. ಸಿದ್ದನಗೌಡರವರು ಸಭೆಯಲ್ಲಿ ಹಾಜರಿಲ್ಲ. ಆದ್ದರಿಂದ ಈಗ ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ನೀಡಬಹುದು.

ಶ್ರೀ ವಾಟಾಳ್ ನಾಗರಾಜ್ : ನಾನೂ ಸಹ ಗುಲ್ಬರ್ಗಾದ ಬಗ್ಗೆ ಮಾತನಾಡಬೇಕು. ಗುಲ್ಬರ್ಗಾ ಎಂದರೆ ಇಂಡಿಯಾ ಬಿಟ್ಟು ಹೊರಗೆ ಹೋಗಿದೆಯೇ?

ಶ್ರೀಮತಿ ಮೋಟಮ್ಮ : ನಮ್ಮ ಭಾಗದಲ್ಲೂ ಸಹ ಮಳೆ ಬರುತ್ತಾ ಇಲ್ಲ. ಆದ್ದರಿಂದ ನಾವೂ ಇದರ ಮೇಲೆ ಮಾತನಾಡಬಹುದೇ?

ಉಪಾಧ್ಯಕ್ಷೆಯವರು : ಮಾನ್ಯ ವಾಟಾಳ್‌ರವರೇ, ಈಗ ನಿಮ್ಮ ಹೆಸರು ಇದರಲ್ಲಿ ಇದೆಯೇ ಎಂದು ನೋಡುತ್ತೇನೆ. ನಂತರ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನೂ ಸಹ ಗುಲ್ಬರ್ಗಾದ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ.

ಉಪಾಧ್ಯಕ್ಷೆಣಿಯವರು : ಮಾನ್ಯ ಕಮರುಲ್ ಇಸ್ಲಾಂ ಅವರು ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನೂ ಸಹ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ.

+ ಉಪಾಧ್ಯಕ್ಷೆಣಿಯವರು : ಅವರು ಹೇಳಿದೇ ಇರುವ ವಿಚಾರಗಳು ಏನಾದರೂ ಇದೆಯೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಶ್ರೀಮಾನ್ ಕಮರುಲ್ ಇಸ್ಲಾಂ ಅವರು ಗುಲ್ಬರ್ಗಾ ಸಿಟಿ ಬಗ್ಗೆ ಮತನಾಡಿದ್ದಾರೆ. ಅವರ ಜೊತೆಯಲ್ಲಿ ಮಾನ್ಯ ಬಸವರಾಜ ರಾಯರೆಡ್ಡಿ ಮತ್ತು ಮಾನ್ಯ ಏಕಾಂತಯ್ಯನವರು, ಮಾನ್ಯ ನಾಗಮಾರಪಲ್ಲಿ ಅವರು ಕೂಡ ಇದೇ ವಿಚಾರದಲ್ಲಿ ಗಮನಸೆಳೆಯುವ ಸೂಚನೆ ಕೊಟ್ಟಿದ್ದಾರೆ. ಅವರೆಲ್ಲಾ ಗುಲ್ಬರ್ಗಾದ ವಿಷಯವನ್ನು ಹೇಳಿದ್ದಾರೆ. ನಾನು ಆ ವಿಷಯ ಹಿಡಿದುಕೊಂಡು ಉಳಿದ ಎಲ್ಲಾ ವಿಷಯಗಳನ್ನೂ ಕೂಡ ಇಲ್ಲಿ ಪ್ರಸ್ತಾಪ ಮಾಡುತ್ತೇನೆ ಮತ್ತು ವಿಶೇಷವಾಗಿ ಅವರು ಗುಲ್ಬರ್ಗಾದ ಬಗ್ಗೆ ಹೇಳಿರುವ ಬಗ್ಗೆ ಒಂದು ಸ್ಟೇಟ್‌ಮೆಂಟ್ ಅನ್ನು ಮಾಡುತ್ತೇನೆ.

1991–92ರಲ್ಲಿ ರಾಜ್ಯವು ಬಡ್ತಿ ಹಾಗೂ ಪ್ರವಾಹಗಳೆರಡನ್ನೂ ಅನುಭವಿಸಿದೆ. ಕಳೆದ ವರ್ಷದ ಮುಂಗಾರಿನ ಭಾರಿ ಮಳೆಯಿಂದ ಮಲೆನಾಡು ಹಾಗೂ ಸಮುದ್ರ ತೀರದ ಪ್ರದೇಶಗಳಲ್ಲಿ ಮತ್ತು ಅಕ್ಟೋಬರ್ ಹಾಗೂ ನವೆಂಬರ್ ತಿಂಗಳುಗಳಲ್ಲಿ ಬಂಗಾಳ ಕೊಲ್ಲಿಯಲ್ಲಿ ಉಂಟಾದ ವಾಯುಭಾರ ಕುಸಿತದಿಂದ ಉಂಟಾದ ಭಾರಿ ಮಳೆಯಿಂದ ತುಮಕೂರು, ಕೋಲಾರ, ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ), ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿನ ಕೃಷಿ ಬೆಳೆ, ರಸ್ತೆ, ಕಟ್ಟಡಗಳು, ಸಣ್ಣ ನೀರಾವರಿ ಕೆರೆಗಳು, ಮನೆಗಳು ಮತ್ತು ಇತರೆ ಸಾರ್ವಜನಿಕ ಆಸ್ತಿ–ಪಾಸ್ತಿಗಳಿಗೆ ಅಪಾರ ಹಾನಿಯುಂಟಾಗಿರುತ್ತದೆ. ಈ ಮೇಲ್ಕಂಡ ಜಿಲ್ಲೆಗಳಲ್ಲಿ ಹಾನಿಯ ಪ್ರಮಾಣವು ಎಷ್ಟು ಅಗಾಧವಾಗಿತ್ತೆಂದರೆ, ಸುಮಾರು ಒಂದು ಲಕ್ಷ ಮನೆಗಳು ಭಾಗಶಃ ಹಾಗೂ 40,460 ಮನೆಗಳು ಪೂರ್ಣವಾಗಿ ಹಾನಿಗೊಳಗಾಗಿರುತ್ತವೆ.

ಅಲ್ಲದೆ, ಗುಲ್ಬರ್ಗಾ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಅತಿ ಕಡಿಮೆ ಬಿದ್ದ ಮುಂಗಾರು ಮಳೆಯಿಂದ ಮತ್ತು ಹಿಂಗಾರು ಮಳೆಯ ಸಂಪೂರ್ಣ ಅಭಾವದ ಪರಿಣಾಮವಾಗಿ ಈ ಜಿಲ್ಲೆಗಳಲ್ಲಿನ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ಪೂರ್ಣ ಹಾನಿಯುಂಟಾಗಿರುತ್ತದೆ. ಅಲ್ಲದೆ, ಕುಡಿಯುವ ನೀರಿನ ಅಭಾವ, ಉದ್ಯೋಗ ಮತ್ತು ಮೇವಿನ ಅಭಾವ ಉಂಟಾಗಿರುತ್ತದೆ.

ರಾಜ್ಯ ಸರ್ಕಾರವು ನೆರೆಯಿಂದ ಮೊಂದ ಸಂತ್ರಸ್ಥರ ನೋವು ನಿವಾರಣೆ ಸಲುವಾಗಿ ಮತ್ತು ಬರ ಇರುವ ಜಿಲ್ಲೆಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು, ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ರಾಜ್ಯದ ವಾರ್ಷಿಕ ವಂತಿಗೆಯನ್ನು ಸೇರಿದಂತೆ, ಕೆಳಕಾಣಿಸಿದಂತೆ ಹಣವನ್ನು ಬಿಡುಗಡೆ ಮಾಡಿರುತ್ತದೆ.

	ಕೋಟಿ ರೂಗಳಲ್ಲಿ
(1) ವಾರ್ಷಿಕ, ಪ್ರಕೃತಿ ವಿಕೋಪದಡಿಯಲ್ಲಿ ಕೇಂದ್ರ ಸರ್ಕಾರದ ಭಾಗ	20.26
(2) ವಾರ್ಷಿಕ, ರಾಜ್ಯ ಸರ್ಕಾರದ ಭಾಗ	6.75
	27.00

ಹೆಚ್ಚುವರಿ ವಂತಿಗೆ

1991–92ನೇ ಸಾಲಿನ ಪೂರಕ ಅಂದಾಜಿನ ಮೂಲಕ 48.00

ಒಟ್ಟು 75.00 ಕೋಟಿ

1991–92ನೇ ಸಾಲಿನಲ್ಲಿ ಭಾರಿ ಮಳೆಯಿಂದ ನಷ್ಟ ಹೊಂದಿದ ಸಾರ್ವಜನಿಕ ಆಸ್ತಿ–ಪಾಸ್ತಿಗಳ ದುರಸ್ಥಿ ಮತ್ತು ಪುನರ್ ಸ್ಥಾಪನೆಗಾಗಿ ಮತ್ತು ಅಭಾವಪೀಡಿತ ಜಿಲ್ಲೆಗಳಲ್ಲಿ ಬರ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು, ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡಂತೆ ಸರ್ಕಾರವು ಹಣವನ್ನು ಬಿಡುಗಡೆ ಮಾಡಿದೆ–

		ಕೋಟಿ ರೂಗಳಲ್ಲಿ
(1) ಲೋಕೋಪಯೋಗಿ ಇಲಾಖೆಯ ರಸ್ತೆ ಮತ್ತು ಸೇತುವೆಗಳ ದುರಸ್ಥಿಗಾಗಿ		13.00
(2) ಕೃಷಿ ಬೆಳೆ ಹಾನಿಗೆ ಪರಿಹಾರ ನೀಡಲು		2.50
(3) ಪ್ರವಾಹ ಪರಿಹಾರ ಕಾರ್ಯಕ್ರಮಗಳಿಗಾಗಿ		
(ಅ) ಭಾಗಶಃ ಕುಸಿದು ನಷ್ಟ ಹೊಂದಿದ ಮನೆಗಳಿಗೆ ಪರಿಹಾರ	8.03	
(ಅ) ಕೆರೆ, ಕಾಲುವೆ, ರಸ್ತೆ, ಇತ್ಯಾದಿಗಳ ದುರಸ್ಥಿ ಮತ್ತು ಪುನರ್ ನಿರ್ಮಾಣಕ್ಕಾಗಿ	7.92	15.95
(4) ಪ್ರವಾಹಪೀಡಿತ ಜಿಲ್ಲೆಗಳಲ್ಲಿ ಅತೀವೃಷ್ಟಿಯಿಂದ ಸಂಪೂರ್ಣವಾಗಿ ಬಿದ್ದ ಮನೆಗಳ ಬದಲಿಗೆ 'ಆಶ್ರಯ' ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಲು		20.00
(5) ಉದ್ಯೋಗ ಸೃಜನೆಗಾಗಿ		4.36
(6) ಕುಡಿಯುವ ನೀರಿನ ಪೂರೈಕೆಗಾಗಿ		10.05
(7) ಮೇವು ಪೂರೈಕೆ ಮತ್ತು ಪಶುಸಂಗೋಪನೆ ಚಿಕಿತ್ಸೆ		0.18
(8) ಆಕಸ್ಮಿಕ ಅಗ್ನಿ ಅನಾಹುತಗಳಿಗೆ ಪರಿಹಾರ		0.58
		ಒಟ್ಟು ರೂ. 66.62 ಕೋಟಿ

1992–93ರಲ್ಲಿ ಪ್ರವಾಹದಿಂದ ಉಂಟಾಗಬಹುದಾದ ಯಾವುದೇ ಪರಿಸ್ಥಿತಿಯನ್ನು ನಿಭಾಯಿಸಲು, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಸುರಕ್ಷಿತ ಹಂತಕ್ಕೆ ತರಲು ಮತ್ತು ಅಭಾವಪೀಡಿತ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಸರ್ಕಾರದ 1992–93ನೇ (ದಿನಾಂಕ 1.4.92ರಿಂದ 30.6.1992ರವರೆಗೆ) ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಗೆ ಈ ಕೆಳಕಂಡಂತೆ ಹಣವನ್ನು ಬಿಡುಗಡೆ ಮಾಡಿದೆ.

	ಕೋಟಿ ರೂಗಳಲ್ಲಿ
(1) ಹಾನಿಗೀಡಾದ ಸಣ್ಣ ನೀರಾವರಿ ಕೆರೆ : ಕಾಲುವೆಗಳ ದುರಸ್ಥಿ ಮಾಡಲು	3.69
(2) ಕುಡಿಯುವ ನೀರಿನ ಪೂರೈಕೆಗಾಗಿ	5.90
(3) ಉದ್ಯೋಗ ಸೃಜನೆಗಾಗಿ	1.08
(4) ಮೇವು ಪೂರೈಕೆಗಾಗಿ	0.10
(5) ಬೆಂಕಿ ಆಕಸ್ಮಿಕಕ್ಕೆ ಪರಿಹಾರ	0.59
	ಒಟ್ಟು ರೂ. 11.36 ಕೋಟಿ

ಋತುಮಾನ ಪರಿಸ್ಥಿತಿ – 1992

ಪ್ರಾರಂಭಿಕ ಮಳೆಗಾಲ ಏಪ್ರಿಲ್ ಅಂತ್ಯದಲ್ಲಿ ಮಾತ್ರ ಪ್ರಾರಂಭವಾಯಿತು. ರಾಜ್ಯದಲ್ಲಿ ಬಿದ್ದ ಆರಂಭಿಕ ಮಳೆಯ ಸರಾಸರಿ ಪ್ರಮಾಣವು ಕಳೆದ ವರ್ಷದ ಸಾಧಾರಣ ಮಳೆ 138 ಮಿಲಿಮೀಟರ್‌ಗೆ ಹೋಲಿಸಿದರೆ, ಕೇವಲ 98 ಮಿಲಿಮೀಟರ್ ಆಗಿದ್ದು, ಶೇಕಡ 31ರಷ್ಟು ಕಡಿಮೆಯಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಾರಂಭಿಕ ಮಳೆಗಾಲ ಅಷ್ಟೇನೂ ಆಶಾದಾಯಕವಾಗಿರಲಿಲ್ಲ.

ಜೂನ್ 1ರಿಂದ 8ನೇ ಜುಲೈ 1992ರ ಅವಧಿಯ ಮುಂಗಾರು ಮಳೆಯ ವಿಶ್ಲೇಷಣೆ

ಬೆಂಗಳೂರು ವಿಭಾಗ

ಬೆಂಗಳೂರು ವಿಭಾಗದ 50 ತಾಲ್ಲೂಕುಗಳಲ್ಲಿ 30 ತಾಲ್ಲೂಕುಗಳಲ್ಲಿ ಸಾಧಾರಣಕ್ಕಿಂತ ಹೆಚ್ಚು ಮಳೆಯೂ, 3 ತಾಲ್ಲೂಕುಗಳಲ್ಲಿ ಸಾಧಾರಣ ಮತ್ತು ಉಳಿದ 12 ತಾಲ್ಲೂಕುಗಳಲ್ಲಿ ಸಾಧಾರಣಕ್ಕಿಂತ ಕಡಿಮೆ ಮಳೆಯೂ ಬಿದ್ದಿರುತ್ತದೆ. ಸಾಧಾರಣಕ್ಕಿಂತ ಹೆಚ್ಚಿನ ಮಳೆಯ ಕಾರಣದಿಂದಾಗಿ ಮುಂಗಾರು ಬೆಳೆಗಳಾದ ಮುಸುಕಿನ ಜೋಳ, ಮೆಕ್ಕೆ ಜೋಳ, ರಾಗಿ, ದ್ವಿದಳ ಧಾನ್ಯ ಮತ್ತು ಇತರ ಬೆಳೆಗಳ ಬಿತ್ತನೆಗೆ ಸಹಾಯಕವಾಯಿತು. ಹಾಗೂ ಈ ವಿಭಾಗದಲ್ಲಿ ಮುಂಚೆತವಾಗಿ ಬಿತ್ತಿದ್ದ ದ್ವಿದಳ ಧಾನ್ಯ, ಎಳ್ಳು, ಅಲಸಂದೆಗಳು ಅರಳುವ ಹಂತದಲ್ಲಿವೆ, ಹಾಗೂ ರೈತರು ಭತ್ತದ ನಾಟಿಯನ್ನು ಮಾಡುತ್ತಿದ್ದಾರೆ.

ಬೆಂಗಳೂರು (ನಗರ), ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ನೀರಿನ ಮಟ್ಟವು ಕಡಿಮೆಯಾಗಿ, ಕೆಲವು ತಾಲ್ಲೂಕುಗಳಲ್ಲಿ ನೀರಿನ ಅಭಾವ ಉಂಟಾಗಿದೆಯೆಂದು ವರದಿಗಳಿವೆ. ಇಂತಹ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಜಿಲ್ಲಾಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಮೈಸೂರು ವಿಭಾಗ

ಈ ವಿಭಾಗ 44 ತಾಲ್ಲೂಕುಗಳ ಪೈಕಿ 19 ತಾಲ್ಲೂಕುಗಳಲ್ಲಿ ಸಾಮಾನ್ಯ ಮಳೆ ಬಿದ್ದಿದ್ದು, ಉಳಿದ 25 ತಾಲ್ಲೂಕುಗಳಲ್ಲಿ, ಅದರಲ್ಲೂ ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯುಂಟಾಗಿರುತ್ತದೆ. ಮಲೆನಾಡು ಮತ್ತು ಸಮುದ್ರ ತೀರದ ಜಿಲ್ಲೆಗಳಲ್ಲಿ 1992ರ ಜೂನ್ ತಿಂಗಳಿನಲ್ಲಿ ಮುಂಗಾರು ಹೆಚ್ಚಾಗಿದ್ದರೂ, ವಿಳಂಬವಾಗಿ ಮುಂಗಾರು ಪ್ರಾರಂಭವಾದುದರಿಂದ, ಮಳೆಯ ಪ್ರಮಾಣವು ಸಾಮಾನ್ಯಕ್ಕಿಂತ ಕಡಿಮೆ ಉಂಟಾಗಿರುತ್ತದೆ. ಮಲೆನಾಡು ಮತ್ತು ಸಮುದ್ರ ತೀರದ ಜಿಲ್ಲೆಗಳಲ್ಲಿನ ಜಮೀನುಗಳು ಬಿತ್ತನೆಗೆ ಸಿದ್ಧವಾಗಿರುತ್ತದೆ. ಅನಂತರ, ಉಳುಮೆ ಮತ್ತು ಇತರ ಕೃಷಿ ಕಾರ್ಯಕ್ರಮಗಳು, ಮತ್ತು ರಾಗಿ ಬಿತ್ತನೆಯು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮುಂದುವರಿದಿದೆ.

ಬೆಳಗಾವಿ ವಿಭಾಗ

ಬೆಳಗಾವಿ ಜಿಲ್ಲೆ

ಜಿಲ್ಲೆಯ 10 ತಾಲ್ಲೂಕುಗಳ 8 ತಾಲ್ಲೂಕುಗಳಲ್ಲಿ ಸಾಮಾನ್ಯ ಮಳೆಯು ಬಿದ್ದಿದ್ದು ಉಳಿದ 2 ತಾಲ್ಲೂಕುಗಳಾದ ರಾಮದುರ್ಗ ಮತ್ತು ಹುಕ್ಕೇರಿಗಳಲ್ಲಿ ಕಡಿಮೆ ಮಳೆಯಾಗಿರುತ್ತದೆ. 6.27 ಲಕ್ಷ ಹೆಕ್ಟೇರ್‌ಗಳಲ್ಲಿನ ಸಾಮಾನ್ಯ ಮುಂಗಾರು ಬೆಳೆ ಪ್ರದೇಶದ ಬದಲಾಗಿ 4.53 ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆ ಕಾರ್ಯ ಕೈಗೊಂಡಿರುತ್ತದೆ. ಬೆಳೆಯ ಸ್ಥಿತಿಯು ಉತ್ತಮವಾಗಿರುತ್ತದೆ. ಆದರೆ ಶುರ್ತಾಗಿ ಮಳೆ ಅತ್ಯಗತ್ಯವಾಗಿರುತ್ತದೆ. ಹುಕ್ಕೇರಿ ಮತ್ತು ರಾಮದುರ್ಗ ತಾಲ್ಲೂಕುಗಳ ಅಲ್ಲಲ್ಲಿ ಕುಡಿಯುವ ನೀರಿನ ಅಭಾವವಿದ್ದು, ಜಿಲ್ಲೆಯ ಇತರೆಡೆ ಕುಡಿಯುವ ನೀರಿನ ಅಭಾವವಿರುವುದಿಲ್ಲ.

ಉತ್ತರ ಕನ್ನಡ ಜಿಲ್ಲೆ

ಮುಂಗಾರು ಮಳೆಯು ವಿಳಂಬವಾಗಿ ಪ್ರಾರಂಭವಾಗಿದ್ದರೂ, ಜೂನ್ ತಿಂಗಳಲ್ಲಿ ಬಿದ್ದ ಸಾಕಷ್ಟು ಮಳೆಯಿಂದ ಜಮೀನುಗಳಲ್ಲಿ ಬಿತ್ತನೆ ಮತ್ತು ಸಸಿನೆಡುವ ಕಾರ್ಯಗಳಿಗೆ ಸಿದ್ಧತೆಗಳು ನಡೆದಿರುತ್ತವೆ. ಕುಡಿಯುವ ನೀರಿನ ಹಾಗೂ ಮೇವು ಕೊರತೆ ಬಗ್ಗೆ ವರದಿಗಳು ಬಂದಿರುವುದಿಲ್ಲ. ಕೃಷಿ ಕಾರ್ಯಕ್ರಮಗಳನ್ನು ಮುಂದುವರಿದಿದೆ.

ಬಿಜಾಪುರ ಜಿಲ್ಲೆ

ಜಿಲ್ಲೆಯ 11 ತಾಲ್ಲೂಕುಗಳ ಪೈಕಿ, 7 ತಾಲ್ಲೂಕುಗಳಲ್ಲಿ ಮಳೆಯ ಪ್ರಮಾಣ ಸಾಮಾನ್ಯ ಸ್ಥಿತಿಯಲ್ಲಿದ್ದು, ಉಳಿದ 4 ತಾಲ್ಲೂಕುಗಳಾದ ಬಾದಾಮಿ, ಬಾಗೇವಾಡಿ, ಇಂಡಿ, ಮುದ್ದೇಬಿಹಾಳ ಮತ್ತು ಬಿಜಾಪುರಗಳಲ್ಲಿ ಮಳೆಯ ಅಭಾವ ಉಂಟಾಗಿರುತ್ತದೆ. ಮುಂಗಾರಿನ ಸಾಮಾನ್ಯ ಬೆಳೆ ಪ್ರದೇಶವಾದ 4.56 ಲಕ್ಷ ಹೆಕ್ಟೇರ್ ಪೈಕಿ 1.69 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆಯಾಗಿರುತ್ತದೆ. ಅಭಾವಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗಿರುತ್ತದೆ. ತಾಲ್ಲೂಕುಗಳಲ್ಲಿನ ಮುಂಗಾರು ಮುಂಚಿನ ಬಿತ್ತನೆ ಬೆಳೆಗಳಾದ ಜೋಳ, ದ್ವಿದಳ ಧಾನ್ಯ, ಸೂರ್ಯಕಾಂತಿ, ಕಾಳು ಮತ್ತು ಶೇಂಗಾ ಬೆಳೆಗಳು ಉತ್ತಮ ಸ್ಥಿತಿಯಲ್ಲಿರುತ್ತವೆ.

1991ರಲ್ಲಿ ಬಿಜಾಪುರ ಜಿಲ್ಲೆಯು ತೀವ್ರ ಅಭಾವಕ್ಕೊಳಗಾಗಿತ್ತು. ಅಭಾವಪೀಡಿತ ಪ್ರದೇಶಗಳಲ್ಲಿ ನೊಂದವರ ಕಷ್ಟಕರ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರವು 1991–92ನೇ ಸಾಲಿನಲ್ಲಿ 260.00 ಲಕ್ಷ ರೂಪಾಯಿಗಳನ್ನೂ ಮತ್ತು 1992–93ನೇ ಸಾಲಿನಲ್ಲಿ 75.00 ಲಕ್ಷ ರೂಪಾಯಿಗಳನ್ನು ಈ ಜಿಲ್ಲೆಗೆ ಬಿಡುಗಡೆ ಮಾಡಿದೆ.

ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯಲ್ಲಿ ಇದುವರೆಗೂ 155 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಬಿಜಾಪುರ ನಗರದಲ್ಲಿ ಉಂಟಾದ ಕುಡಿಯುವ ನೀರಿನ ತೀವ್ರ ಅಭಾವದ ನಿವಾರಣೆಗಾಗಿ, ಸರ್ಕಾರವು 50.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಗುಲ್ಬರ್ಗಾ ವಿಭಾಗ

ಬಳ್ಳಾರಿ ಜಿಲ್ಲೆ

8 ತಾಲ್ಲೂಕುಗಳ ಪೈಕಿ 5 ತಾಲ್ಲೂಕುಗಳಲ್ಲಿ ಸಾಮಾನ್ಯವಾದ ಮಳೆ ಬಿದ್ದಿದ್ದು, ಉಳಿದ 3 ತಾಲ್ಲೂಕುಗಳಾದ ಸಿರಗುಪ್ಪ, ಕೂಡ್ಲಿಗಿ, ಮತ್ತು ಹರಪನಹಳ್ಳಿಗಳಲ್ಲಿ ಕಡಿಮೆ ಮಳೆ ಬಿದ್ದಿರುತ್ತದೆ. ಸಾಮಾನ್ಯ ಮುಂಗಾರು ಬೆಳೆ ಪ್ರದೇಶವಾದ 4.65 ಲಕ್ಷ ಹೆಕ್ಟೇರ್ ಪೈಕಿ 2.06 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ಬಿತ್ತನೆಯಾಗಿದ್ದು, ಶೇಕಡ 44.3 ಆಗುತ್ತದೆ. ನೀರಾವರಿಗಳಲ್ಲದ ಪ್ರದೇಶಗಳಲ್ಲಿ, ಬೆಳೆಗಳಿಗೆ ತಕ್ಷಣವೇ ಮಳೆ ಬೇಕಾಗಿರುತ್ತದೆ. ಜಿಲ್ಲೆಯಲ್ಲಿನ ನೀರಾವರಿಯಲ್ಲದ ಪಟ್ಟಿಯಲ್ಲಿ ಬರುವ ಕೆಲವು ಗ್ರಾಮಗಳನ್ನು ಹೊರತುಪಡಿಸಿ, ಜಿಲ್ಲೆಯ ಇತರ ಭಾಗಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದಿಲ್ಲ.

1991–92ರಲ್ಲಿ ಉಂಟಾದ ಅಭಾವ ಪರಿಸ್ಥಿತಿಯನ್ನು ಎದುರಿಸಲು ಮತ್ತು ಅಪೂರ್ಣವಾಗಿರುವ ಪರಿಹಾರ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವ ಸಲುವಾಗಿ ಸರ್ಕಾರವು 1991–92ನೇ ಸಾಲಿನಲ್ಲಿ 197.00 ಲಕ್ಷ ರೂಗಳನ್ನು ಮತ್ತು 1991–92ನೇ ಸಾಲಿನಲ್ಲಿ 45.00 ಲಕ್ಷ ರೂಪಾಯಿಗಳನ್ನು ಈ ಜಿಲ್ಲೆಗೆ ಬಿಡುಗಡೆ ಮಾಡಿದೆ.

ನಗರ ಪ್ರದೇಶದಲ್ಲಿ 195 ಕೊಳವೆ ಬಾವಿಗಳನ್ನು ಮತ್ತು 139 ಕೊಳವೆ ಬಾವಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿಯೂ, ಒಟ್ಟು 334 ಕೊಳವ ಬಾವಿಗಳನ್ನು ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕೊರೆಯಲಾಗಿದೆ. ಜಿಲ್ಲಾಧಿಕಾರಿಯವರು ಜಿಲ್ಲೆಯಲ್ಲಿ 250 ಹಳ್ಳಿಗಳನ್ನು ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳೆಂದು ಗುರುತಿಸಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಯಚೂರು ಜಿಲ್ಲೆ

9 ತಾಲ್ಲೂಕುಗಳ ಪೈಕಿ 3 ತಾಲ್ಲೂಕುಗಳಲ್ಲಿ ಸಾಮಾನ್ಯ ಮಳೆಯೂ, ಇನ್ನುಳಿದ 6 ತಾಲ್ಲೂಕುಗಳಾದ ದೇವದುರ್ಗ, ಲಿಂಗಸೂಗೂರು, ಸಿಂಧನೂರು, ಮಾನ್ವಿ, ಕವಿತಾಳ ಮತ್ತು ಮಸ್ಕಿಗಳಲ್ಲಿ ಅತಿ ಕಡಿಮೆ ಮಳೆಯು ಬಿದ್ದಿರುತ್ತದೆ. ಜುಲೈ ತಿಂಗಳ ಮಳೆಯ ಪ್ರಮಾಣ ಕಡಿಮೆಯಾಗಿರುವುದರಿಂದ, ರೈತರಲ್ಲಿ ಆತಂಕ ಉಂಟಾಗಿರುತ್ತದೆ. ಸಾಮಾನ್ಯ ಮುಂಗಾರು ಬೆಳೆಯ 5.5 ಲಕ್ಷ ಹೆಕ್ಟೇರ್ ಪ್ರದೇಶದ ಪೈಕಿ 1.93 ಲಕ್ಷ ಹೆಕ್ಟೇರ್‌ಗಳಲ್ಲಿ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದ್ದು, ಶೇಕಡ 34.8 ಪ್ರಮಾಣವಾಗಿರುತ್ತದೆ.

1991–92ರಲ್ಲಿ ಜಿಲ್ಲೆಯ ಕೆಲವು ಭಾಗದಲ್ಲಿ ಅಭಾವ ಉಂಟಾಗಿರುತ್ತದೆ. ಪರಿಹಾರ ಕಾರ್ಯಕ್ರಮಗಳಿಗಾಗಿ, 1991–92ರಲ್ಲಿ 244.50 ಲಕ್ಷ ರೂಗಳನ್ನು ಮತ್ತು 1992–93ನೇ ಸಾಲಿಗೆ 66.00 ಲಕ್ಷ ರೂಪಾಯಿಗಳನ್ನೂ ಈ ಜಿಲ್ಲೆಗೆ ಸರ್ಕಾರವು ಬಿಡುಗಡೆ ಮಾಡಿದೆ.

ಜಿಲ್ಲೆಯ ನಗರ ಪ್ರದೇಶದಲ್ಲಿ 45 ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 221 ಕೊಳವೆ ಬಾವಿಗಳನ್ನು ಅಭಾವ ಪರಿಹಾರ ಕಾರ್ಯಕ್ರಮದಡಿ ಇದುವರೆಗೂ ಕೊರೆಯಲಾಗಿದೆ.

ಬೀದರ್ ಜಿಲ್ಲೆ

ಜಿಲ್ಲೆಯ 5 ತಾಲ್ಲೂಕುಗಳ ಪೈಕಿ 2 ತಾಲ್ಲೂಕುಗಳಲ್ಲಿ ಸಾಮಾನ್ಯ ಮಳೆಯು ಬಿದ್ದಿರುತ್ತದೆ. ಉಳಿದ 3 ತಾಲ್ಲೂಕುಗಳಾದ ಬಸವ ಕಲ್ಯಾಣ, ಭಾಲ್ಕಿ ಮತ್ತು ಹುಮ್ನಾಬಾದ್‌ಗಳಲ್ಲಿ ಅತೀ ಕಡಿಮೆ ಮಳೆ ಬಿದ್ದಿರುತ್ತದೆ. ಜಿಲ್ಲೆಯಲ್ಲಿ ಒಂದು ಅಥವಾ ಎರಡು ವಾರಗಳಲ್ಲಿ ಮಳೆ ಬಾರದಿದ್ದರೆ, ಕುಡಿಯುವ ನೀರಿನ ಮತ್ತು ಮೇವಿನ ಅಭಾವ ಉಂಟಾಗುವ ಸಾಧ್ಯತೆ ಇರುತ್ತದೆ.

3.16 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಮುಂಗಾರು ಬೆಳೆ ಬಿತ್ತನೆಯಾಗಿದ್ದು, ಒಣಹವೆಯಿರುವುದರಿಂದ, ಬೆಳೆಗಳು ಒಣಗುತ್ತಿವೆ.

ಈ ಜಿಲ್ಲೆಯು 1991–92ರಲ್ಲಿಯೂ ಸಹಾ ತೀವ್ರ ಅಭಾವಕ್ಕೊಳಗಾಗಿತ್ತು. ಅಭಾವ ಪರಿಹಾರ ಕಾರ್ಯಕ್ರಮಗಳಿಗಾಗಿ 1991–92ನೇ ವರ್ಷದಲ್ಲಿ 220.00 ಲಕ್ಷ ರೂಗಳನ್ನು ಹಾಗೂ 1992–93ನೇ ವರ್ಷದಲ್ಲಿ 75.00 ಲಕ್ಷ ರೂಗಳನ್ನೂ ಈ ಜಿಲ್ಲೆಗೆ ಸರ್ಕಾರವು ಬಿಡುಗಡೆ ಮಾಡಿರುತ್ತದೆ.

85 ಕೊಳವೆ ಬಾವಿಗಳನ್ನು ನಗರ ಪ್ರದೇಶದಲ್ಲಿ ಮತ್ತು 219 ಕೊಳವೆ ಬಾವಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ, ಹೀಗೆ ಒಟ್ಟು 304 ಕೊಳವೆ ಬಾವಿಗಳನ್ನು ಅಭಾವ ಪರಿಹಾರ ಕಾರ್ಯಕ್ರಮದಡಿ ಕೊರೆಯಲಾಗಿದೆ.

ಗುಲ್ಬರ್ಗಾ ಜಿಲ್ಲೆ

ಜಿಲ್ಲೆಯ ಎಲ್ಲಾ 10 ತಾಲ್ಲೂಕುಗಳಲ್ಲಿ ಮಳೆಯ ಕೊರತೆ ಉಂಟಾಗಿರುತ್ತದೆ. ಕೃಷಿಗಾಗಿ ಭೂಮಿಯನ್ನು ಸಿದ್ಧಪಡಿಸುವ ಕಾರ್ಯವಿನ್ನೂ ಪ್ರಾರಂಭವಾಗಿಲ್ಲ. ಒಂದು ವೇಳೆ ಇದೇ ವಾತಾವರಣ ಮುಂದುವರಿದರೆ ಕುಡಿಯುವ ನೀರಿನ ಮತ್ತು ಮೇವಿನ ತೀವ್ರ ಅಭಾವ ಉಂಟಾಗುತ್ತದೆ. ಜಿಲ್ಲೆಯ ಎಲ್ಲಾ ಕಡೆ ಕುಡಿಯುವ ನೀರಿನ ತೀವ್ರ ಅಭಾವವಿದ್ದು ಅದರಲ್ಲೂ ಗುಲ್ಬರ್ಗಾ ನಗರದಲ್ಲಿ ಇದರ ತೀವ್ರತೆಯು ಹೆಚ್ಚಾಗಿರುತ್ತದೆ. ಸಾಮಾನ್ಯ ಮುಂಗಾರು ಬೆಳೆ ಬೆಳೆಯುವ 7.74 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೇವಲ 1.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯವು ಕೈಗೊಂಡಿದ್ದು, ಶೇಕಡಾವಾರು 4.1 ಆಗಿರುತ್ತದೆ.

1991–92ನೇ ವರ್ಷದಲ್ಲಿಯೂ ಸಹ, ಗುಲ್ಬರ್ಗಾ ಜಿಲ್ಲೆಯು ತೀವ್ರ ಅಭಾವಕ್ಕೊಳಗಾಗಿತ್ತು. ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ 1991–92ನೇ ವರ್ಷದಲ್ಲಿ 423.50 ಲಕ್ಷ ರೂಗಳನ್ನು ಮತ್ತು 1992–93ನೇ ವರ್ಷದಲ್ಲಿ 208.00 ಲಕ್ಷ ರೂಪಾಯಿಗಳನ್ನೂ ಸರ್ಕಾರವು ಬಿಡುಗಡೆ ಮಾಡಿರುತ್ತದೆ.

531 ಕೊಳವೆ ಬಾವಿಗಳನ್ನು ನಗರ ಪ್ರದೇಶಗಳಲ್ಲಿ ಮತ್ತು 518 ಕೊಳವೆ ಬಾವಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ, ಹೀಗೆ ಒಟ್ಟು 1,049 ಕೊಳವೆ ಬಾವಿಗಳನ್ನು ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ, ಈ ಜಿಲ್ಲೆಯಲ್ಲಿ ಕೊರಯಲಾಗಿದೆ.

ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿನ ಅಭಾವ

1991–92 ಮತ್ತು 1992–93ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಉಂಟಾದ ಮಳೆ ಅಭಾವದಿಂದ ಗುಲ್ಬರ್ಗಾ ನಗರಕ್ಕೆ ನೀರನ್ನು ಪೂರೈಕೆ ಮಾಡುವ ಬೆಣ್ಣಿತೊರೆ ಮತ್ತು ಭೋಸ್ಗಾ ಜಲಾಶಯಗಳಲ್ಲಿ ಸಾಕಷ್ಟು ನೀರು ಶೇಖರಣೆಯಾಗಿರಲಿಲ್ಲ. ಭೋಸ್ಗಾ ಜಲಾಶಯದಲ್ಲಿ ದೊರೆಯುತ್ತಿದ್ದು ನೀರು ದಿನಾಂಕ 30–6–1992ಕ್ಕೆ ಮುಗಿದುಹೋಗಿರುತ್ತದೆ. ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರವು 284 ಕೊಳವೆ ಬಾವಿಗಳನ್ನು ಗುಲ್ಬರ್ಗಾ ನಗರದಲ್ಲಿ ಕೊರೆದಿದೆ. ಇವುಗಳಲ್ಲಿ, ಹೆಚ್ಚಿನ ನೀರು ನೀಡುವ 40 ಕೊಳವೆ ಬಾವಿಗಳಿಗೆ ಪಂಪುಗಳನ್ನು ಅಳವಡಿಸಲಾಗಿದೆ. ಆದರೂ ನೀರಿನ ಪೂರೈಕೆ ಸಮರ್ಪಕವಾಗಿರಲಿಲ್ಲ. ನೀರನ್ನು ಒದಗಿಸಲು ಜಿಲ್ಲಾಧಿಕಾರಿಯವರು ವಿವಿಧ ಇಲಾಖೆಗಳ 115 ಟ್ರಕ್ ಮತ್ತು ಟ್ಯಾಂಕರ್‌ಗಳನ್ನು ನಿಯೋಜಿಸಿಕೊಂಡಿರುತ್ತಾರೆ. ಅಲ್ಲದೆ, ರೈಲ್ವೆ ವ್ಯಾಗನ್ ಮುಖಾಂತರ ತುಂಗಭದ್ರಾ ನದಿಯ ನೀರನ್ನು ಮಂತ್ರಾಲಯದಿಂದ ದಿನಾಂಕ 30–6–1992ರಿಂದ ಕೊಂಡೊಯ್ಯಲಾಗುತ್ತಿದೆ

ಗುಲ್ಬರ್ಗಾ ನಗರದ ನೀರಿನ ಪೂರೈಕೆ ಸಲುವಾಗಿ, ವಿವಿಧ ಯೋಜನೆಗಳಿಗೆ ಸರ್ಕಾರವು ಈಗಾಗಲೇ 200.00 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದು, ಇದರಲ್ಲಿ 66.00 ಲಕ್ಷ ರೂಪಾಯಿಗಳನ್ನು 'ಪ್ರಕೃತಿ ವಿಕೋಪ ಪರಿಹಾರ ನಿಧಿ'ಯಿಂದ ಭರಿಸಲಾಗಿದೆ. ಅಲ್ಲದೆ, ಗುಲ್ಬರ್ಗಾ ನಗರದ ನೀರಿನ ಪೂರೈಕೆಗಾಗಿ ಪ್ರತ್ಯೇಕವಾಗಿ 50.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ಮತ್ತು ಜಿಲ್ಲಾಧಿಕಾರಿಯವರಿಗೆ ಗುಲ್ಬರ್ಗಾ ನಗರವೂ ಸೇರಿದಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ಸಲುವಾಗಿ 75.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಈ ರೀತಿಯಾಗಿ ಅಭಾವ ಪರಿಸ್ಥಿತಿಯಲ್ಲಿರತಕ್ಕಂಥ ಅಥವಾ ಮಳೆಬಿದ್ದು ಹಾನಿಗೆ ತುತ್ತಾಗಿರುವ ಜಿಲ್ಲೆಗಳಿಗೆ ಸರ್ಕಾರ ಸಾಕಷ್ಟು ಸಹಾಯವನ್ನು ಮಾಡಿದೆ. ಆದೂ ಅಲ್ಲದೆ ಈಗಾಗಲೇ ಮಾನ್ಯ ಕಮರುಲ್ ಇಸ್ಲಾಂರವರು ಹೇಳಿದ ಎಲ್ಲವನ್ನೂ ಮಾಡಿದ್ದೇವೆ. ಆದರೂ ಹೀಗೆ ಅಂದರೆ ಹೇಗೆ?

ಶ್ರೀ ಸಿ. ಬೈರೇಗೌಡ : ಶಾನುಭೋಗರಿಗೆ ಸರಿಯಾದ ಲೆಕ್ಕ ಒಪ್ಪಿಸಿದ್ದೀರೋ ಎಂದು ಕೇಳಿದ್ದರೂ ಕೂಡ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಕೇಳಿದ್ದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಆದರೂ ಕೂಡ ಅವರ ಗಮನಕ್ಕೆ ಇನ್ನೊಂದು ವಿಷಯವನ್ನು ತರುತ್ತಿದ್ದೇನೆ. ಸ್ಪೆಷಲ್ ಆಗಿ ಗುಲ್ಬರ್ಗಾ ಸಿಟಿಗೆ ನಾವು ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

Due to failure of rains in catchment of Bhosga reservoir, the water level has already reached the dead water storage level. There is no supply of water either from Bhosga tank or Bennithora at present. The last supply of water given from Bhosga alone is on 30-6-1992. Subsequently, immediate arrangements have been made to supply of water from Railways Tankers and also from borewells. Water is being continuously conveyed from borewells, from Railway tankers and from Bhima river also.

About 2.50 Million Gallons of water is conveyed from the above 3 sources to the filter plant and filterd water is collected in the various storage tanks in Gulbarga city and supplied once in 3 days.

To tackle the water scarcity problem, borewells were drilled and harnessed as follows :

No. of borewells drilled	–	267
No. successful	–	242
No. of handpumps fixed	–	202
No. of power pumps fixed	–	34

This is in addition to the already existing old borewells with handpumps and power pumps.

About 100 trucks with tankers have been deployed for conveying of water. More and more tankers are being added.

It is proposed to maintain the supply once in 3 days by the following arrangements :

1. 2.50 lakh gallons of water from Borewells & openwells
2. 3.00 lakh gallons of water from Railway wagons
3. 3.00 lakh gallons of water from Bhima River

8.50 lakh gallons per day.

Any shortage of supply from Railway wagons will be made up by conveying water from Bhima River.

So far the Government has spent about Rs. 2.00 crores in providing Scarcity relief measures to Gulbarga city as above.

The water supply scheme to Gulbarga city with Bhima river as source is in progress. So far Rs. 15.00 crores have been spent on the work. All the components of works are in progress and the scheme is scheduled for supplying clarified water by Decembr 1992 and filtered water by June 1993.

1. When the Bhima Project was sanctiond	Vide G.O. No. HUD So UWs 86 dt : 21-5-1987	
2. What was the estimated cost	Rs. 1286.00 lakhs – Technical sanction Vide No. 5670 dt : 17-3-88.	
3. When the Gulbarga city faced scarcity in the last occassion	Bhosga dried up in Sept. 1977- Water again received in November 1977.	
4. What steps Government took then	Some Borewells were drilled and water conveyed from Bhima river in tankers.	
5. The amount spent by present	1989-90	Rs. 235.00 lakhs

	Government on Bhima Project from 1990 to 1992 - year-wise break up	1990-91 1990-92 1991-93	Rs. 320.00 lakhs Rs. 430.00 lakhs Rs. 108.00 lakhs
6.	The amount spent by previous Governments	1987-88 1988-89	Rs. 33.00 lakhs Rs. 71.00 lakhs
7.	The date of commissioning of the Bhima Project	Clarified water by December 1992 and filtered water by June 1993.	
8.	Total capacity	11 M.G.D. (I Stage – 6 M.G.D.)	

We are trying our best. Shri. Qumarul Islam also knows it. He came with us and he has visited all the spots. He has seen the work but still he has put so many questions and my answer is that this Government is sincerely working and we are making all efforts. I must also be thankful to the Railway Minister Shri Jaffer Shriff. He has also promotly responded to our request for supplying water through Wagons. 120 wagons came yesterday, day before yesterday 80 Wagons came. Every day we are also in touch with them. ಪ್ರತಿಯೊಂದನ್ನು ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಅವರು ಈಗಲಾದರೂ ಸಂತೋಷಪಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

Sri. QUMARAL ISLAM : High speed rings should be used and in borewells, there is no water.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಅರ್ಬನ್ ವಾಟರ್ ಸಪ್ಲೈ ಬೋರ್ಡಿನ ಎಂ.ಡಿ. ಅವರಿಗೂ, ನಮ್ಮ ಡೆಪ್ಯುಟಿ ಕಮೀಷನರ್‌ರವರಿಗೂ ಹಣವನ್ನು ಕೊಟ್ಟಿದ್ದೇವೆ. ಹೈ ಸ್ಪೀಡ್ ರಿಗ್‌ಗಳು ನಮ್ಮ ಗೌರ್ನಮೆಂಟ್‌ನಲ್ಲಿ ಇಲ್ಲದಿದ್ದರೆ ಬೇರೆ ಎಲ್ಲಿಂದಲಾದರೂ ತೆಗೆದುಕೊಳ್ಳಬೇಕೆಂದು ಹಣವನ್ನು ಕೊಟ್ಟಿದ್ದೇವೆ. They can get it on hire and do it. We have given free hand and there is no restriction. Depending upon the situation, he should act. That free hand, we have given and you know it. Even in Rural Development Department also nearly 12 High speed rigs we are purchasing from Ingersol Rand out of that also wherever distress districts are there, there we will send.

ವಿಷಯ : ಫೇರ್‌ಗ್ರೋಥ್ ಫೈನಾನ್ಸಿಷಲ್ ಸರ್ವೀಸಸ್ ಬಗ್ಗೆ :

ಶ್ರೀ ಸಿ. ಬೈರೇಗೌಡ : (ವೇಮಗಲ್) ಮಾನ್ಯ ಉಪಾಧ್ಯಕ್ಷೆಣಿಯವರೇ, ನಾನು ಬೆಳಿಗ್ಗೆ ಅಧ್ಯಕ್ಷರ ಹತ್ತಿರ ಈ ಬಗ್ಗೆ ಮಾತನಾಡಿ ಬರವಣಿಗೆಯಲ್ಲಿಯೂ ಕೂಡ ಕಳುಹಿಸಿದ್ದೇನೆ. ಅದರಲ್ಲಿ ನಾನು, ಮಾನ್ಯ ವೈ.ಕೆ. ರಾಮಯ್ಯ ಹಾಗೂ ಚಂದ್ರೇಗೌಡರು ರುಜು ಮಾಡಿ ಕಳುಹಿಸಿದ್ದೇವೆ. ಅದು ನಿಯಮಾವಳಿ 68ರ ಪ್ರಕಾರ ಚರ್ಚೆ ಮಾಡಬೇಕು ಎನ್ನತಕ್ಕಂಥಾದ್ದು. ವಿಷಯ ಏನೆಂದರೆ, ದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಸೆಕ್ಯೂರಿಟಿ ಹಗರಣ ನಡೆದಿದೆ. ನನ್ನ ಲೆಕ್ಕದಲ್ಲಿ ಹೇಳುವುದಾದರೆ ಸುಮಾರು 20 ಸಾವಿರ ಕೋಟಿ ರೂಪಾಯಿಗಳಷ್ಟು ಸಾರ್ವಜನಿಕರ ಹಣ ಇವೊತ್ತು ನಾಪತ್ತೆಯಾಗಿದೆ. ಸರ್ಕಾರ ತನ್ನ ಲೆಕ್ಕದ ಪ್ರಕಾರ ಮೂರೂವರೆ ಸಾವಿರ ಕೋಟಿ ರೂಪಾಯಿಗಳೆಂದು ಹೇಳುತ್ತಿದೆ. ಆದರೆ, ಪತ್ರಿಕೆಗಳಲ್ಲಿ ಬಂದಿರುವ ವರದಿ ಪ್ರಕಾರ ಸುಮಾರು 16–17 ಸಾವಿರ ಕೋಟಿ ರೂಪಾಯಿಗಳು ಎಂಬ ಮಾತನ್ನು